MARCH 31, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ರಾಜ್ಯದ ಸರ್ಕಾರಿ ಹಾಗೂ ಅನುದಾನಿತ,** ಶಾಲೆ–ಕಾಲೇಜುಗಳ, ವಿದ್ಯಾರ್ಥಿಗಳ ಹಾಜರಾತಿಯನ್ನು, ಕೃತಕಬುದ್ಧಿಮತ್ತೆ ಆಧಾರಿತ, ಮುಖ ಪತ್ತೆ, ಮೊಬೈಲ್ ಅಪ್ಲಿಕೇಷನ್ ಮೂಲಕ ದಾಖಲಿಸುವ, 'ನಿರಂತರ' ಯೋಜನೆ ಅನುಷ್ಠಾನಕ್ಕಾಗಿ, 2 ಕೋಟಿ 83 ಲಕ್ಷ ರೂಪಾಯಿ ಅನುದಾನ, ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಒರ್ಯಾಕಲ್ ಸಾಫ್ಟವೇರ್ ಲೈಸನ್ಸ್ ನೊಂದಿಗೆ, ಹತ್ತು ವರ್ಷಗಳ ಕಾಲ ನಿರ್ವಹಿಸುವ ಒಡಂಬಡಿಕೆ ಮಾಡಲಾಗಿದೆ.

<><><>

**ರಾಜ್ಯದಲ್ಲಿ ತ್ರಿಭಾಷಾ ಸೂತ್ರ ಮುಂದುವರೆಸಲು,** ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ, ಒತ್ತಾಯಿಸಿ, ಪತ್ರ ಬರೆದಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಲ್ಯಾಮಿಂಗ್ಟನ್ ಹೈಸ್ಕೂಲ್ ಸಭಾಂಗಣದಲ್ಲಿ, ಹಿಂದಿ ಭಾಷಾ ಶಿಕ್ಷಕರ ಜೊತೆ, ಅವರು ಸಮಾಲೋಚಿಸಿದರು. ಸಭಾಪತಿಗಳಿಗೆ, ಹಿಂದಿ ಶಿಕ್ಷಕರು ಮನವಿ ಸಲ್ಲಿಸಿ, 1961 ರಲ್ಲಿ ಜಾರಿಗೊಂಡ, ಬಹುಭಾಷಾ ಕಲಿಕಾ ನೀತಿಗೆ ಪೆಟ್ಟು ಬೀಳಲಿದೆ. ರಾಜ್ಯ ಸರ್ಕಾರದ ಗ್ರೇಡಿಂಗ್ ನೀತಿ ಖಂಡನಾರ್ಹ. 15 ಸಾವಿರಕ್ಕೂ ಹೆಚ್ಚು ಹಿಂದಿ ಭಾಷೆ ಬೋಧಕರು ಮತ್ತು ಅವರ ಕುಟುಂಬಗಳು ಅತಂತ್ರವಾಗಲಿವೆ ಎಂದು, ಅಹವಾಲು ಸಲ್ಲಿಸಿದರು.

<><><>

**ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ,** ಕರ್ನಾಟಕದಲ್ಲಿ ತುಸು ಹೆಚ್ಚು ಧಾವಂತದಲ್ಲಿದೆ. ಶಿಕ್ಷಣದ ವಾಣಿಜ್ಯೀಕರಣ, ಜನ ಅರ್ಥ ಮಾಡಿಕೊಳ್ಳದಿದ್ದರೆ, ಸಾರ್ವಜನಿಕ ಶಿಕ್ಷಣ ಸಂಪೂರ್ಣ ಸಂಕಷ್ಟಕ್ಕೆ ಸಿಲುಕಲಿದೆ ಎಂದು, ಸಾಹಿತಿ ಹೇಮಾ ಪಟ್ಟಣಶೆಟ್ಟಿ, ತೀವ್ರ ಕಳವಳ ವ್ಯಕ್ತ ಪಡಿಸಿದ್ದಾರೆ.

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ, ಧಾರವಾಡ ಜಿಲ್ಲೆ 18ನೇ ಸಾಹಿತ್ಯ ಸಮ್ಮೇಳನದ, ಸರ್ವಾಧ್ಯಕ್ಷರ ಭಾಷಣದಲ್ಲಿ, ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚದಂತೆ, ಅವರು ಒತ್ತಾಯಿಸಿದರು.

<><><>

**ಇತ್ತೀಚೆಗೆ ಸುರಿದ, ಆಲಿಕಲ್ಲು ಮಳೆಯಿಂದ,** ತೀವ್ರ ಹಾನಿಗೀಡಾದ, ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು, ಮಾಚಾಪುರ ಗ್ರಾಮಕ್ಕೆ ಭೇಟಿ ನೀಡಿದ, ಜಿಲ್ಲಾ ಉಸ್ತುವಾರಿ ಸಚಿವ, ಸಂತೋಷ ಲಾಡ, ಗ್ರಾಮಸ್ಥರೊಂದಿಗೆ ಚರ್ಚಿಸಿ, ಮಾಹಿತಿ ಪಡೆದರು. ಬಳಿಕ ಮಾತನಾಡಿದ ಸಚಿವರು, ರೈತರ ಹಿತಕಾಯಲು, ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಪ್ರತಿ ಹೊಲಕ್ಕೆ ಭೇಟಿ ನೀಡಿ, ಶೀಘ್ರ ಹಾನಿಯ ವರದಿ ಸಿದ್ಧಪಡಿಸಿ, ನೀಡಲಿದ್ದಾರೆ. ಅರ್ಹ ರೈತರಿಗೆ, ವಿಳಂಬ ಮಾಡದೇ, ಪರಿಹಾರ ಒದಗಿಸಲಾಗುವುದು ಎಂದು, ಭರವಸೆ ನೀಡಿದರು.

<><><>

**ಬಾಗಲಕೋಟೆ ವಿಧಾನಸಭಾ ಕ್ಷೇತ್ರದ,** ಉಪ ಚುನಾವಣೆ ಹಿನ್ನೆಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ, ಮತಯಾಚಿಸಿದರು. ಸುತಗುಂಡಾರ, ನಾಯನೇಗಲಿ ಗ್ರಾಮಗಳಲ್ಲಿ, ಪ್ರಚಾರ ಸಭೆ ನಡೆಸಿದ ಮುಖ್ಯಮಂತ್ರಿ, ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಿಸುವ ವಿ ’ಯದಲ್ಲಿ, ಕೇಂದ್ರದ ಬಿ.ಜೆ.ಪಿ. ಸರ್ಕಾರ, ಜನವಿರೋಧಿ ನಿಲುವು ತಾಳಿದೆ ಎಂದು, ಟೀಕಿಸಿದರು. ಸ್ವಾಧೀನ ಪಡಿಸಿಕೊಂಡ, ರೈತರ ಕೃಷಿ ಭೂಮಿಗೆ, ಪ್ರತಿ ಎಕರೆ, ನೀರಾವರಿ ಜಮೀನಿಗೆ, 40 ಲಕ್ಷ ಹಾಗೂ ಒಣ ಭೂಮಿಗೆ 30 ಲಕ್ಷ ರೂಪಾಯಿ, ಪರಿಹಾರ ನೀಡಲಾಗುತ್ತದೆ ಎಂದರು.

<><><>

**ಉತ್ತರಕನ್ನಡ ಜಿಲ್ಲೆ, ಅಘನಾಶಿನಿ ನದಿ ಕಣಿವೆಯ,** ಅಪ್ಪೇಮಿಡಿ ಮಾವು ತಳಿಯ, ಸಮೀಕ್ಷೆ ಹಾಗೂ ಮೂರು ದಿನಗಳ ಅಧ್ಯಯನ ಪಾದಯಾತ್ರೆ, ಸರಕುಳಿ ಹೊಳೆ ಅಂಚಿನ, ಅಪ್ಪೇಮಿಡಿ ವೃಕ್ಷ ತಾಣದಲ್ಲಿ ಆರಂಭವಾಗಿದೆ. ಹೆಗ್ಗರಣಿ, ಹೇರೂರು, ಮುಕ್ತಿಹೊಳೆ, ಉಂಚಳ್ಳಿ ಮುಂತಾದ 20 ಹಳ್ಳಿಗಳಲ್ಲಿ, ಸಮೀಕ್ಷೆ ನಡೆಯಲಿದೆ ಎಂದು, ವಿಜ್ಞಾನಿ ಬಾಲಚಂದ್ರ ಹೆಗಡೆ, ಸಾಯಿಮನೆ ತಿಳಿಸಿದರು. ನಾಳೆ ಮಧ್ಯಾಹ್ನ 3 ಗಂಟೆಗೆ ಸಮಾರೋಪಗೊಳ್ಳಲಿರುವ, ಅಪ್ಪೇಮಿಡಿ ಸಮೀಕ್ಷೆ ಪಾದಯಾತ್ರೆಯ ಸಂಯೋಜಕ, ಗಣಪತಿ ಹೆಗಡೆ, ಬಿಸ್ಲಕೊಪ್ಪ ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲೂಕು,** ಹಿಡಕಲ್ ಜಲಾಶಯದ ಹಿನ್ನೀರಿನಲ್ಲಿ ಈಜಲು ತೆರಳಿದ್ದ, ಐವರು ಬಾಲಕರ ಪೈಕಿ, ಇಬ್ಬರು ಬಾಲಕರು ಮೃತಪಟ್ಟ ದುರ್ಘಟನೆ, ಹಳೆ ಗುಡಗನಟ್ಟಿ ಗ್ರಾಮದಲ್ಲಿ ನಡೆದಿದೆ. ಯಮಕನಮರಡಿಯ, 14 ವರ್ಷದ ಕೃಷ್ಣ ವಿಠ್ಠಲ ಖಾನಾಪುರಿ ಹಾಗೂ ಪ್ರಜ್ವಲ ಮುತ್ತೆಪ್ಪ ಗೋಕಾರ, ಸಾವನ್ನಪ್ಪಿದ್ದಾರೆ.

<><><>

**ರೇಡಿಯೋ ಕಾಲರ್ ಅಳವಟ್ಟ ಕರಡಿ,** ಶಿವಮೊಗ್ಗ ವಿಮಾನ ನಿಲ್ದಾಣದ ಆವರಣವನ್ನು, ಆಕಸ್ಮಿಕವಾಗಿ ಪ್ರವೇಶಿಸಿತ್ತು. ಅರಣ್ಯ ಇಲಾಖೆ ಸಿಬ್ಬಂದಿ ಬಂಧಿಸಿ, ಸುರಕ್ಷಿತ ಪುನರ್ವಸತಿ ಕಲ್ಪಿಸಿದ್ದಾರೆ.

<><><>

**ಕನ್ನಡದ ನಟಿ ಹಾಗೂ ನಿರ್ದೇಶಕಿ,** ರೂಪಾ ಅಯ್ಯರ್ ನಟಿಸಿ, ನಿರ್ದೇಶಿಸಿದ, ಹಿಂದಿ ಸಿನೆಮಾ, 'ಆಝಾದ್ ಭಾರತ್', ನಾಳೆ ಸಂಜೆ 6 ಗಂಟೆಗೆ, ಹೊಸ ದಿಲ್ಲಿಯ ಸಂಸತ್ ಭವನದ, ಜಿ.ಎಂ.ಸಿ. ಬಾಲಯೋಗಿ, ಸಭಾಂಗಣದಲ್ಲಿ ಪ್ರದರ್ಶನಗೊಳ್ಳಲಿದೆ. ಈ ಚಿತ್ರ, ನೇತಾಜಿ ಸುಭಾಷ್ ಚಂದ್ರ ಬೋಸ್ ಹಾಗೂ ಸ್ವಾತಂತ್ರ್ಯ ಹೋರಾಟಗಾರ್ತಿ ನೀರಾ ಆರ್ಯ ಅವರ ಕುರಿತಾದ, ಕಥಾ ಹಂದರ ಹೊಂದಿದೆ.

<><><>

**ಸಾರ್ವತ್ರಿಕ ಜನಗಣತಿ ಹಿನ್ನೆಲೆ,** ಮೊದಲ ಹಂತದ, ಪೂರ್ವಭಾವಿ ಮನೆಪಟ್ಟಿ ಗಣತಿ, ನಾಳೆಯಿಂದ ಆರಂಭವಾಗಲಿದೆ. ಇಂದು, ಸ್ವಾತಂತ್ರ್ಯೋತ್ತರ ಭಾರತದ 8ನೇ ಜನ ಗಣತಿಯಾಗಿದ್ದು, 2 ಹಂತಗಳಲ್ಲಿ ನಡೆಯಲಿದೆ. ಹೊಸ ದಿಲ್ಲಿಯಲ್ಲಿ ಮಾಹಿತಿ ನೀಡಿದ, ಜನಗಣತಿ, ಕೇಂದ್ರ ಆಯುಕ್ತ, ಮೃತ್ಯುಂಜಯಕುಮಾರ ನಾರಾಯಣ, ನಾಳೆಯಿಂದ ಸೆಪ್ಟೆಂಬರ್ 30ರ ವರೆಗೆ, ಮನೆಗಳ ಪಟ್ಟಿ ಮತ್ತು ಸ್ವಯಂಗಣತಿ ನಡೆಯಲಿದೆ. ಎರಡನೇ ಹಂತದಲ್ಲಿ, ಜಾತಿ ಗಣತಿ ಮಾಡಲಾಗುವುದು ಎಂದರು. ಸ್ವಯಂ ಗಣತಿ ವೆಬ್ ಪೋರ್ಟಲ್, **se.census.gov.in** ಮೂಲಕ, ಸಾರ್ವಜನಿಕರು, ತಮ್ಮ ಕುಟುಂಬದ ಸಾಮಾನ್ಯ ಮಾಹಿತಿಯನ್ನು, ಭರ್ತಿ ಮಾಡಬಹುದು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**